ತೆಗೆದಿದ್ದು ಅದಕ್ಕೆ ವಿದ್ಯುತ್ ಪಂಪನ್ನೂ ಸಹ ಜೋಡಣೆ ಮಾಡಿ ವಿದ್ಯುತ್ತಿನ ಸಂಪರ್ಕ ನೀಡದಿರುವುದರಿಂದ ನೀರನ್ನು ಸಸಿಗಳಿಗೆ ಒದಗಿಸಲಾಗಿದೆ 5 ಸಾವಿರ ಸಸಿಗಳು ಏಪ್ರಿಲ್ ಮೇ ತಿಂಗಳಿನಲ್ಲಿ ಒಣಗಿ ಹೋಗಿ ಅವುಗಳ ಬದಲಿಗೆ ಬರುವ ವರ್ಷ ಹೊಸ ಸಸಿಗಳನ್ನು ನೆಡುವಂತಹ ಪರಿಸ್ಥಿತಿ ಬಂದಿದೆ. ಆದ್ದರಿಂದ ಈ ತೋಟದ ರಕ್ಷಣೆಗೆ ಮತ್ತು ಆ ಚಾರಿತ್ರಿಕ ನ್ಯಾಯಬಸಿದಿಯ ಸೌಂದರ್ಯವನ್ನು ಹೆಚ್ಚಿಸುವಂತಹ ಯೋಜನೆಯನ್ನು ಅಳವಡಿಸಿದಂತ ತಾವುಗಳು ನೀರನ್ನು ಕೊಡಿಸಲಿಕ್ಕೆ ವಿಕೆ ಸೂಕ್ತ ಕ್ರಮವನ್ನು ಕೈಗೊಳ್ಳಬಾರದು ಎಂದು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಸಭಾಧ್ಯಕ್ಷರೇ, ಕೊಳವೆಬಾವಿ ವಿಚಾರದಲ್ಲಿ ಹೇಳಿದ್ದಾರೆ. ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ ಮತ್ತು ಅಲ್ಲಿ ಸುಂದರವಾದಂತಹ ವಾತಾವರಣವನ್ನು ಸೃಷ್ಟಿ ಮಾಡಲಿಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ಈ ಆರ್ಥಿಕ ವರ್ಷದಲ್ಲಿ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಕೆ. ಸೋಮಣ್ಣ ಸುವರ್ಣ: ಮಾನ್ಯ ಅಧ್ಯಕ್ಷರೆ, ಏಪ್ರಿಲ್ ಮೇ ತಿಂಗಳಲ್ಲಿ ಬಹಳಷ್ಟು ಬಿಸಿಲಿರುವುದರಿಂದ ಅಲ್ಲಿರುವ ಸಸಿಗಳೆಲ್ಲ ಒಣಗಿಹೋಗುವ ಕಾರಣ ನೀವು ಇಷ್ಟೆಲ್ಲಾ ಖರ್ಚುಮಾಡಿದರೂ ಸಹ ನೀರಿನಲ್ಲಿ ಹೋಮ ಮಾಡಿದಂತೆ ಆಗುತ್ತದೆ. ಆದ್ದರಿಂದ ಕೂಡಲೇ ವಿದ್ಯುತ್ ಜೋಡಣೆ ಮಾಡಿ ಆ ನೀರನ್ನು ಸಸಿಗಳಿಗೆ ಉಣಿಸುವಂತಹ ಕೆಲಸವನ್ನು ಕೂಡಲೇ ಮಾಡಬೇಕು, ಯಾವಾಗ ಮಾಡುತ್ತೀರಾ ಎಂದು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ: ಒಂದು ತಿಂಗಳ ಒಳಗಡೆ ಅವರು ಕೇಳಿರುವ ಸೌಕರ್ಯವನ್ನು ಒದಗಿಸಿಕೊಡಲಾಗುವುದು.

ಅಧ್ಯಕ್ಷರು: ಶ್ರೀ ಕೆ. ಸಿದ್ಧಯ್ಯನವರೇ ನಿಮ್ಮ 592ನೇ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೋರಿದ್ದಾರೆ.

ಮಂಗಳೂರು ಜನತಾ ಬಜಾರ್‌ನಲ್ಲಿ ಅವ್ಯವಹಾರ

498 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಜನತಾ ಬಜಾರ್ ಕಳೆದ 5 ವರ್ಷಗಳಿಂದ ವ್ಯಾಪಕ ನಷ್ಟ ಅನುಭವಿಸಿರುವುದು ನಿಜವೇ?

ಆ) ಜನತಾ ಬಜಾರ್ "ನಿರ್ದೇಶಕ ಮಂಡಳಿಯ" ಸದಸ್ಯರು ಸಹಕಾರ ಕಾಯ್ದೆಗೆ ವ್ಯತಿರಿಕ್ತವಾಗಿ ನಿರ್ದೇಶಕರಾಗಿ ಮುಂದುವರಿದಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ?

ಇ) ಜನತಾ ಬಜಾರ್ ನೇಮಕಾತಿಗಳಲ್ಲಿ "ಮೀಸಲಾತಿ" ನಿಯಮಗಳನ್ನು ಅನ್ವಯಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಜನತಾ ಬಜಾರ್ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಹೌದು.

ಆ) ಹೌದು. (ಇಬ್ಬರು ಸದಸ್ಯರ ಬಗ್ಗೆ ಮಾತ್ರ)

ಇ) ಹೌದು

ಈ) ಜನತಾ ಬಜಾರಿನ ವ್ಯವಹಾರಗಳ ಬಗ್ಗೆ ಸಹಕಾರ ಕಾಯ್ದೆ ಕಲಂ 65ರನ್ವಯ ಉಪ ನಿಬಂಧಕರು, ಪರಿವೀಕ್ಷಣೆ ನಡೆಸುತ್ತಿದ್ದು, ಅವರ ವರದಿ ಬಂದ ನಂತರ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ಈಗ ಮಂಗಳೂರಿನ ಜನತಾ ಬಜಾರ್ ಸಾಧಾರಣ ಅವ್ಯವಹಾರಕ್ಕೆ ಇನ್ನೊಂದು ಹೆಸರು ಇದ್ದ ಹಾಗಿದೆ, ಈ ಒಂದು ವಿಷಯದಲ್ಲಿ ಸನ್ಮಾನ್ಯ ಸಚಿವರೊಡನೆ ಈಗಾಗಲೇ ಒತ್ತಾಯ ಮಾಡಿದ್ದೇನೆ. ಈ ಎಲ್ಲ ಪ್ರಶ್ನೆಗಳಿಗೂ ಹೌದು ಎಂದು ಉತ್ತರ ಕೊಡುತ್ತಿದ್ದಾರೆ. ಆದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗಿಲ್ಲ, ಅಲ್ಲಿ ಅಡ್ಮಿನಿಸ್ಟ್ರೇಟರನ್ನು ಹಾಕಲಿಕ್ಕೆ ಕ್ರಮ ಕೈಗೊಳ್ಳಲಾಗುವುದೇ ಎಂದರೆ, ಉಪನಿಬಂಧಕರು ಪರಿವೀಕ್ಷಣೆ ನಡೆಸುತ್ತಿದ್ದು, ಅವರ ವರದಿ ಬಂದನಂತರ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು" ಎಂದು ಹೇಳಿದ್ದಾರೆ. ಈ ಮೂರು ಪ್ರಶ್ನೆಗಳಿಗೆ 'ಹೌದು' ಎಂದು ಒಪ್ಪಿದ ಮೇಲೆ ಮತ್ತೆ ಅವರಿಂದ ರಿಪ್ಲೈ ಬರುವ ಅಗತ್ಯ ಇಲ್ಲ ಎಂದು ನಾನು ಭಾವಿಸುತ್ತೇನೆ. ತಾವು ದಯವಿಟ್ಟು ಕೂಡಲೇ ಅಡ್ಮಿನಿಸ್ಟ್ರೇಟರನ್ನು ಹಾಕಬೇಕು. ಅವರ ಪಕ್ಷದ ಕಾರ್ಯಕರ್ತರನ್ನು ಯಾವುದೇ ನಮ್ಮ ಮೀಸಲಾತಿಯ ನಿಯಮಾವಳಿಯೂ ಇಲ್ಲದೆ ಅದಕ್ಕೆ ಅಪಾಯಿಂಟ್ಮೆಂಟ್ ಮಾಡುತ್ತಿದ್ದಾರೆ. ದಯವಿಟ್ಟು ಇವತ್ತಿನಿಂದಲೇ ಅದಕ್ಕೆ ಅಡ್ಮಿನಿಸ್ಟ್ರೇಟರನ್ನು ಹಾಕುವುದು ಅತ್ಯಂತ ಸೂಕ್ತ ಎಂದು ನನ್ನ ಅನಿಸಿಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಆದಷ್ಟು ಬೇಗನೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ: ಮಂಗಳೂರಿನಿಂದ ರಿಪೋರ್ಟ್ ಈಗಾಗಲೇ ಮೈಸೂರಿಗೆ ಬಂದು ಎರಡು ತಿಂಗಳು ಆಗಿದೆ. ಮಂಗಳೂರಿನಿಂದ ಬೆಂಗಳೂರಿಗೆ ಬರುವುದಕ್ಕೆ ಬಹುಶಃ 5-6 ತಿಂಗಳು ಆಗುತ್ತದೆಯೇ ಅಥವಾ 1 ವರ್ಷ ಆಗುತ್ತದೆಯೋ ಗೊತ್ತಾಗುವುದಿಲ್ಲ. ರಿಪೋರ್ಟನ್ನು ಅಲ್ ರೆಡಿ ಸಬ್ಮಿಟ್ ಮಾಡಿದ್ದಾರೆ. ಬಹುಶಃ ಮಧ್ಯೆ ಇರುವಂಥ ಕೆಲವು ಅಧಿಕಾರಿಗಳು ಇದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬಿಡುವುದಿಲ್ಲ, ದಯವಿಟ್ಟು ಇದನ್ನು ಈ ಘಳಿಗೆಯಲ್ಲಿಯೇ ನೀವು ಮಾಡುವುದು ಅತ್ಯಂತ ಸೂಕ್ತ. ನನಗೆ ಅಲ್ಲಿಯ ಕೆಲಸಗಾರರು ಬಂದು ಇದನ್ನು ಹೇಳುತ್ತಿದ್ದು, ತಾವು ದಯವಿಟ್ಟು ಕೂಡಲೇ ಇದಕ್ಕೆ ಅಡ್ಮಿನಿಸ್ಟ್ರೇಟರನ್ನು ಹಾಕುವುದು ಉತ್ತಮ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ಹೇಳಿದ್ದೇನೆ. ಕಾನೂನು ಪ್ರಕಾರ ನೋಟೀಸ್ ಕೊಟ್ಟು ವಿಚಾರಣೆ ಮಾಡಬೇಕಾಗುತ್ತದೆ, ಈ ಬಗ್ಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈಗ ನಾವು ಕ್ರಮ ತೆಗೆದುಕೊಂಡರೆ ನಾಳೆ ಅವರು ಹೈಕೋರ್ಟಿಗೆ ಹೋಗಿ ಸ್ಟೇ ತರುವುದಕ್ಕೆ ಅವಕಾಶ ಮಾಡಿಕೊಡಬಾರದು. ವ್ಯವಸ್ಥಿತವಾಗಿ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈಗ ನೀವು ಕೊಟ್ಟ ಆಪಾದನೆಗಳನ್ನು ವಿಚಾರಣೆ ಮಾಡಿದ ಮೇಲೆ ಕೆಲವು ಪ್ರೂವ್ ಆಗಿವೆ. ಅದಕ್ಕಾಗಿ ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಮತ್ತು ಈಗಾಗಲೇ ನಮ್ಮಲ್ಲಿ ರಿಪೋರ್ಟ್ ಬಂದಿದೆ ಸದಸ್ಯರ ಮೇಲೂ ಕೂಡ ಬಂದಿದೆ ಮತ್ತು ಯಾವರೀತಿಯಾಗಿ ನಷ್ಟ ಆಗಿದೆ ಎಂದೂ ಕೂಡ ಈಗಾಗಲೇ ನಾನು ತಮಗೆ ಸ್ಪಷ್ಟಪಡಿಸಿದ್ದೇನೆ, ಉತ್ತರದಲ್ಲೂ ಕೂಡ ಇದೆ. ಅದನ್ನು ಈಗಲೇ ಅಂದರೆ ವಿಧಾನಸೌಧದಲ್ಲಿ ಮಾಡುವುದಕ್ಕಾಗುವುದಿಲ್ಲ, ಆಫೀಸಿಗೆ ಹೋಗಿ ಫೈಲ್ ನೋಡಿ ಅದರಲ್ಲಿ ಉತ್ತರ ಏನು ಬಂದಿದೆ ನೋಡಿಕೊಂಡು ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ: ನೀವು ಉತ್ತರ ಕೊಟ್ಟಿದ್ದೀರಿ, ಈ ಸಹಕಾರಿ ಕಾಯಿದೆಗೆ ವ್ಯತಿರಿಕ್ತವಾಗಿ ನಿರ್ದೇಶಕರು ಮುಂದುವರಿಯುತ್ತಿದ್ದಾರೆ ಎಂದು. ಇದು ಇನ್ನೂ ಅಂಗೈ ಮೇಲೆ ಇದೆ ಮತ್ತು ಮೀಸಲಾತಿಯಲ್ಲಿಯೂ ಸಹ ನಿಯಮಾವಳಿಗಳನ್ನು

ಅನುಸರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳುತ್ತೀರಿ ಮತ್ತೆ ಯಾರದೋ ಒಬ್ಬರ ರಿಪೋರ್ಟ್ಗಾಗಿ ಏತಕ್ಕೆ ಕಾಯಬೇಕು ಎಲ್ಲಾ ಆಗಿದ್ದು ಇಷ್ಟೊಂದು ಕ್ಲಿಯರ್ ಇರುವಾಗ ನೀವು ಅಡ್ಮಿನಿಸ್ಟ್ರೇಟರನ್ನು ಹಾಕಲಿಕ್ಕೆ ಆಗುವುದಿಲ್ಲವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನು ಈಗಾಗಲೇ ಹೇಳಿದ್ದೇನೆ, ಅದರಲ್ಲಿ ಲೋಪದೋಷಗಳು ಕಂಡಿವೆ, ಅಪಾಯಿಂಟ್ಮೆಂಟ್ನೂ ಕೂಡ ಸರಿಯಾಗಿ ಮಾಡಿಲ್ಲ ಮತ್ತು ಕೆಲವು ಸದಸ್ಯರು ಕೂಡ ಅವರು ಸೊಸೈಟಿನಲ್ಲಿ ಡಿಫಾಲಟರ್ಸ್ ಇದ್ದು ಇಲ್ಲಿ ಬಂದಿದ್ದಾರೆ. ಇವೆಲ್ಲವೂ ಕೂಡ ಇದೆ. ಅದಕ್ಕಾಗಿ ನಾನು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ ಎಂಬ ಮಾತನ್ನು ಹೇಳಿದ್ದೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ: ಮಾನ್ಯ ಅಧ್ಯಕ್ಷರೆ, ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಪ್ರಾಮುಖ್ಯವಾದ ವಿಷಯವಾಗಿ ಪರಿಣಮಿಸಿದೆ. ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಅಲ್ಲಿ ದುಡಿಯುವಂಥ ನೌಕರರಿಗೆ ತೊಂದರೆ ಮಾಡುತ್ತಿದ್ದಾರೆ. ಅನಾವಶ್ಯಕವಾಗಿ ಬಹಳಷ್ಟು ನಷ್ಟಗಳನ್ನು ಅನುಭವಿಸುತ್ತಿದ್ದೇವೆ. ಈ ದಿಸೆಯಲ್ಲಿ ಎಷ್ಟು ತಡವಾಗುತ್ತದೆಯೇ ಅಷ್ಟೂ ನಮಗೆ ಅನ್ಯಾಯವಾಗುತ್ತದೆ ಅಷ್ಟು ನಮಗೆ ನಷ್ಟವುಂಟಾಗುತ್ತದೆ. ಅವರು ತಡಮಾಡುವಂಥ ನೀತಿಯನ್ನು ಅನುಸರಿಸುತ್ತಿದ್ದಾರೆ. ಇಷ್ಟು ದಕ್ಷವಾದ ಮಂತ್ರಿಗಳಾದ ತಾವು ಈ ವಿಚಾರದಲ್ಲಿ ಇಷ್ಟೊಂದು ತಡವಾಗುವುದಕ್ಕೆ ಏತಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರೆಂದು ನಮ್ಮಲ್ಲಿ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ದಿಸೆಯಲ್ಲಿ ತಾವು ಆದ್ಯತಾ ಕ್ರಮದಲ್ಲಿ ಎಷ್ಟುಬೇಗ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವೋ ಅಷ್ಟು ಬೇಗ ತೆಗೆದುಕೊಂಡು ಅವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪರವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಮ್ಮಿಂದ ತಡವಾಗಿದೆ. ಆದರೆ ಕಾನೂನು ಪ್ರಕಾರ ನೋಟೀಸ್ ಕೊಡಬೇಕಾಗುತ್ತದೆ, ಎನ್ಕ್ವೈರಿ ಮಾಡಬೇಕಾಗುತ್ತದೆ. ಅವರು ಇದನ್ನೆಲ್ಲಾ ಹೇಳಿದಮೇಲೆ ನಾನು ಇಷ್ಟೆಲ್ಲಾ ಮಾಡಿದ್ದೇನೆ. ಅವರೆಲ್ಲಾ ಹೇಳಿದಮೇಲೆ ನಾನು ಚುನಾವಣೆಯನ್ನೂ ಕೂಡ ಅಲ್ಲಿ ಮಾಡಿಸಿದೆ. ಆ ಚುನಾವಣೆಯಲ್ಲಿ ಯಾರು ಗೆದ್ದರೆಂಬುದನ್ನು ನಾನು ಈಗ ಹೇಳಬಾರದು. ಅವರು ಹೇಳಿದಂತೆ ನಾಮಿನೇಷನ್ ಮಾಡಿಸಿದ್ದೇವೆ, ಆದರೆ ಅದು ಕೈಗೆ ಬರಲಿಲ್ಲ. ಆ ಮಾತು ಬೇರೆ. ನಾವು ರೂಲ್ಸ್ ಪ್ರಕಾರ ಮಾಡದಿದ್ದರೆ ನಾಳೆ ಹೈ ಕೋರ್ಟ್ನಲ್ಲಿ ನನ್ನ ಮೇಲೆ ಸ್ಪಿರ್ಚುವಲ್ಸ್ ಪಾಸ್ ಮಾಡಿದರೆ ನನ್ನ ರಿಸ್ಕ್ಗೆ ಯಾರೂ ಬರುವುದಿಲ್ಲ. ಆಗ ಎಲ್ಲರೂ ಟೀಕೆ ಮಾಡುತ್ತಾರೆ. ಇವತ್ತು ನಾನು ಫೈಲ್ ನೋಡಿದಮೇಲೆ ಆರ್ಡರ್ ಪಾಸ್ ಮಾಡಬೇಕೇ ಬೇಡವೇ ಎಂಬುದನ್ನು ನೋಡುತ್ತೇನೆ. ಆದರೆ ಈ ಪ್ರಶ್ನೋತ್ತರ ಕಾಲದಲ್ಲಿ ಯಾವುದನ್ನೂ ನೋಡದೆ ತಕ್ಷಣ ಮಾಡುತ್ತೇನೆಂದು ಹೇಳುವುದು ಸರಿಯಾಗಿ ಕಾಣುವುದಿಲ್ಲ. ನಿಧಾನ ಮಾಡುವ ಪ್ರಶ್ನೆಯೇ ನನ್ನಲ್ಲಿಲ್ಲ. ಅವರು ಬಂದಾಗ ನಾನು ಸ್ಪಷ್ಟವಾಗಿ ಹೇಳಿರುವುದರ ಜೊತೆಗೆ ಅವರು ಹೇಳಿದಂತೆ ಕೂಡಲೇ ಕೆಲಸವನ್ನೂ ಕೂಡ ಮಾಡಿಕೊಟ್ಟಿದ್ದೇನೆ. ನೀವು ಪುನಃ ಪುನಃ ಇದನ್ನೇ ಕೇಳುವುದಾದರೆ ನಾನು ಇದೇ ಉತ್ತರವನ್ನೇ ಹೇಳಬೇಕಾಗುತ್ತದೆ.

ಧಾರವಾಡ ಜಿಲ್ಲಾ ಪರಿಷತ್ತಿನಿಂದ ಗ್ರಾಮೀಣ ಕುಡಿಯುವ ನೀರಿನ ಯೋಜನೆ

715 - ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?